## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

ಸಿ.ಸಿ.ನಂ.616/2015

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ.1) ಶಿವಶರಣಪ್ಪ ತಂದೆ ಮಲ್ಲಪ್ಪ ಪವಡಿ,
ವಃ 47 ವರ್ಷ, ಉಃ ಮ್ಯಾನೇಜರ್,
ಸಾಃ ಸಮಾಜ ಕಲ್ಯಾಣ ಇಲಾಖೆ, ಸೇಡಂ.

2) ಬಸಮ್ಮ ಗಂಡ ಶೇಖರ ಹದನೂರು,
ವಃ 47 ವರ್ಷ, ಉಃ ಎಫ್‌ಡಿಎ,
ಸಾಃ ಸಮಾಜ ಕಲ್ಯಾಣ ಇಲಾಖೆ, ಸೇಡಂ.

3) ಶ್ರೀನಿವಾಸ ತಂದೆ ಶ್ಯಾಮರಾವ ಕುಲಕರ್ಣಿ,
ವಃ 34 ವರ್ಷ, ಉಃ ಟೈಪಿಸ್ಟ,
ಸಾಃ ಸಮಾಜ ಕಲ್ಯಾಣ ಇಲಾಖೆ, ಸೇಡಂ.

4) ಲಕ್ಷ್ಮಣ ತಂದೆ ಅರುಣಕುಮಾರ ಮಾಶಾಳಕರ್,
ವಃ 34 ವರ್ಷ, ಉಃ ಕಂಪ್ಯೂಟರ್ ಆಪರೇಟರ್,
ಸಾಃ ಸಮಾಜ ಕಲ್ಯಾಣ ಇಲಾಖೆ, ಸೇಡಂ. **(Abated)**

5) ಇಜಾಜ್ ತಂದೆ ಸೈಯದ ಫಯಾಜ್,
ವಃ 20 ವರ್ಷ, ಸಾಃ ಸಂತ್ರಾಸವಾಡಿ, ಕಲಬುರಗಿ.

6) ಅಬ್ದುಲ ಹಬೀಬ ತಂದೆ ಮಹ್ಮದ ಸಾಬ,
ವಃ 29 ವರ್ಷ, ಉಃ ಖಾಸಗಿ ನೌಕರ,
ಸಾಃ ಮಿಸ್ಕಿನಪುರ, ಸೇಡಂ.

----

### ದೋ ಷಾ ರೋ ಪ ಣೆ

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿಎ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ಆರೋಪಿತರಾದ ನೀನು ದಿನಾಂಕ 30-03-2011 ರಂದು ಸೇಡಂ ಪೊಲೀಸ್ ಠಾಣಾ ಹದ್ದಿಯಲ್ಲಿರುವ ಸೇಡಂನ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ 1 ರಿಂದ 3 ನೇ ಆರೋಪಿತರು ಏಕೋದ್ದೇಶದಿಂದ ಕೂಡಿಕೊಂಡು ಕಚೇರಿಯ ಚೆಕ್ ನಂ.316004 ನೇದ್ದರಲ್ಲಿ ರೂ.5,80,0001/-ಗಳನ್ನು ಬರೆದು, 4 ನೇ ಆರೋಪಿಗೆ ಕೊಟ್ಟಿದ್ದು, 4 ನೇ ಆರೋಪಿ ಚೆಕ್ಕಿನ ಮೇಲೆ

ಸಮಾಜ ಕಲ್ಯಾಣ ಅಧಿಕಾರಿಗಳ ಸೀಲ್ ಹಾಕಿ, ಅದರ ಮೇಲೆ ನಕಲಿ ಸಹಿ ಮಾಡಿ, 6 ನೇ ಆರೋಪಿಗೆ ಚೆಕ್ ನೀಡಿದ್ದು, ಆಗ 6 ನೇ ಆರೋಪಿ ಆ ಚೆಕ್ಕನ್ನು 5 ನೇ ಆರೋಪಿಗೆ ಆಗ 5 ನೇ ಆರೋಪಿ ಚೆಕ್ಕಿನ ಹಿಂದುಗಡೆ ಸಹಿ ಮಾಡಿ ಬ್ಯಾಂಕನಿಂದ ಡ್ರಾ ಮಾಡಿಕೊಂಡು ಬಂದಿದ್ದು, ಆ ಹಣದಲ್ಲಿ 4 ನೇ ಆರೋಪಿಗೆ ರೂ.80,000/-, 5 ನೇ ಆರೋಪಿಗೆ ರೂ.40,000/- ನೀಡಿದ್ದು, 6 ನೇ ಆರೋಪಿ ಉಳಿದ ಹಣ ರೂ.4,60,000/-ಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದು, ಹೀಗೆ ಸರ್ಕಾರದ ಹಣವನ್ನು ವಂಚನೆ ಮಾಡಿ ಸರ್ಕಾರಕ್ಕೆ ಮೋಸ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.467, 468, 420 ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 03-07-2023 ಪ್ರ.ದ.ನ್ಯಾದಂ. ಸೇಡಂ.